**National**
**Kannada**
**22.08.2025 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಭಾರತದ ರಕ್ಷಣಾ ಕಾರ್ಯತಂತ್ರದಲ್ಲಿ ಆಪರೇಷನ್ ಸಿಂದೂರ ಹೊಸ ಅಧ್ಯಾಯ - ಪ್ರಧಾನಿ ನರೇಂದ್ರ ಮೋದಿ
2. ನಾವೀನ್ಯತೆ, ತಂತ್ರಜ್ಞಾನ ಅಭಿವೃದ್ಧಿ ಉತ್ತೇಜಿಸುವ ಮೂಲಕ ದೇಶದಲ್ಲಿ ಬಲಿಷ್ಠ ರಕ್ಷಣಾ ಪರಿಸರ ವ್ಯವಸ್ಥೆ ನಿರ್ಮಾಣ - ರಕ್ಷಣಾ ಸಚಿವ ರಾಜನಾಥ್ ಸಿಂಗ್
3. ದೇಶದಲ್ಲಿ ೨೩ ಚಿಪ್ ವಿನ್ಯಾಸ ಯೋಜನೆಗಳಿಗೆ ಕೇಂದ್ರ ಸರ್ಕಾರ ಮಂಜೂರು
4. ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ : ಬೆಂಗಳೂರಿನಲ್ಲಿ ನಡೆಯಬೇಕಿದ್ದ ಪಂದ್ಯಗಳು ಬೇರೆ ನಗರಗಳಿಗೆ ಸ್ಥಳಾಂತರ

<><><><>

ಭಾರತದ ರಕ್ಷಣಾ ಕಾರ್ಯತಂತ್ರದಲ್ಲಿ ಆಪರೇಷನ್ ಸಿಂದೂರ ಹೊಸ ಅಧ್ಯಾಯವನ್ನು ಬರೆದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಬಿಹಾರದ ಗಯಾದಲ್ಲಿ ೧೨ ಸಾವಿರ ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಭಾರತದೊಳಗೆ ಭಯೋತ್ಪಾದಕರನ್ನು ಕಳುಹಿಸಿದ ನಂತರ ಅಥವಾ ದಾಳಿಗಳನ್ನು ಯೋಜಿಸಿದ ಬಳಿಕ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಭಯೋತ್ಪಾದಕರು ಭೂಮಿಯ ಆಳದಲ್ಲಿ ಅಡಗಿಕೊಂಡರೂ ಸಹ ಭಾರತದ ಕ್ಷಿಪಣಿಗಳು ಅವರನ್ನು ಅಲ್ಲಿಯೇ ಹೂತು ಹಾಕುತ್ತವೆ ಎಂದು ಎಚ್ಚರಿಸಿದರು.

ಇದೇ ವೇಳೆ ನಮಾಮಿ ಗಂಗೆ ಯೋಜನೆಯಡಿಯಲ್ಲಿ ಮುಂಗೇರಿನಲ್ಲಿ ನಿರ್ಮಿಸಲಾದ ಕೊಳಚೆ ನೀರು ಶುದ್ಧೀಕರಣ ಘಟಕ ಮತ್ತು ಒಳಚರಂಡಿ ಜಾಲವನ್ನು ಅವರು ಉದ್ಘಾಟಿಸಿದರು. ಗಯಾ - ದೆಹಲಿ ನಡುವೆ ಅಮೃತ ಭಾರತ ಎಕ್ಸ್‌ಪ್ರೆಸ್ ಹಾಗೂ ವೈಶಾಲಿ - ಕೊಡರ್ಮಾ ನಡುವೆ ಬೌದ್ಧ ಸರ್ಕ್ಯೂಟ್ ರೈಲುಗಳ ಉದ್ಘಾಟನೆಯನ್ನು ನೆರವೇರಿಸಿದರು. ಅಲ್ಲದೇ ಅವರು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಬಕ್ಸಾರ್ ಉಷ್ಣ ವಿದ್ಯುತ್ ಸ್ಥಾವರ, ಔಂಟಾ-ಸಿಮಾರಿಯಾ ಸೇತುವೆ, ಚತುಷ್ಪಥ ಬಖ್ತಿಯಾರ್‌ಪುರ್ - ಮೋಕಾಮಾ ರಾಷ್ಟ್ರೀಯ ಹೆದ್ದಾರಿ-೩೧ ಅನ್ನು ಲೋಕಾರ್ಪಣೆಗೊಳಿಸಿದರು. ಮುಜಫರ್‌ಪುರದಲ್ಲಿರುವ ಹೋಮಿ ಭಾಬಾ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವನ್ನು ಪ್ರಧಾನಿ ಉದ್ಘಾಟಿಸಿದರು. ಪ್ರಧಾನಿ ಆವಾಸ್ ಯೋಜನೆಯಡಿಯಲ್ಲಿ

೧೨ ಸಾವಿರ ಗ್ರಾಮೀಣ ಫಲಾನುಭವಿಗಳು ಮತ್ತು ಪ್ರಧಾನಿ ಆವಾಸ್ ನಗರ ಯೋಜನೆಯಡಿಯಲ್ಲಿ ೪ ಸಾವಿರದ ೨೬೦ ಫಲಾನುಭವಿಗಳಿಗೆ ಗೃಹ ಪ್ರವೇಶ ಕಾರ್ಯಕ್ರಮಕ್ಕೂ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

<><><><>

ಪ್ರಧಾನಿ ನರೇಂದ್ರ ಮೋದಿ ಅವರು ಕೋಲ್ಕತ್ತಾದಲ್ಲಿ ೫ ಸಾವಿರದ ೨೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು. ಇದೇ ವೇಳೆ ಅವರು ಕೋಲ್ಕತ್ತಾದ ಹಳದಿ ಮಾರ್ಗದಲ್ಲಿ ನೋಪರಾ-ಜೈ ಹಿಂದ್ ಬಿಮನ್‌ಬಂದರ್, ಕಿತ್ತಳೆ ಮಾರ್ಗದಲ್ಲಿ ಬೇಲೆಘಾಟ-ಹೇಮಂತ ಮುಖೋಪಾಧ್ಯಾಯ ಮತ್ತು ಹಸಿರು ಮಾರ್ಗದಲ್ಲಿ ಸೀಲ್ದಾ-ಎಸ್‌ಪ್ಲನೇಡ್ ಸೇರಿ ಮೂರು ಮೆಟ್ರೋ ಸೇವೆಗಳನ್ನು ಉದ್ಘಾಟಿಸಿದರು. ನಂತರ ಪ್ರಧಾನಿ ಅವರು ಜೆಸ್ಸೋರ್ ರಸ್ತೆ ಮೆಟ್ರೋ ನಿಲ್ದಾಣದಿಂದ ನೋಪರಾ-ಜೈ ಹಿಂದ್ ಬಿಮನ್‌ಬಂದರ್ ವರೆಗೆ ಮೆಟ್ರೋ ರೈಲಿನಲ್ಲಿ ಸಂಚರಿಸಿದರು.  ರಾಷ್ಟ್ರೀಯ ಹೆದ್ದಾರಿ ಹನ್ನೆರಡು-೧೨ ರಲ್ಲಿ ಏಳು ಕಿಲೋಮೀಟರ್‌ಗಳ ೬ ಪಥದ ಎಲಿವೇಟೆಡ್ ಕೋನಾ ಎಕ್ಸ್‌ಪ್ರೆಸ್‌ವೇಗೆ ಪ್ರಧಾನಿ ನರೇಂದ್ರ ಮೋದಿ ಶಂಕುಸ್ಥಾಪನೆ ನೆರವೇರಿಸಿದರು.

<><><><>

ಭಾರತ ನಾವೀನ್ಯತೆ ಮತ್ತು ತಂತ್ರಜ್ಞಾನ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಕ ಮತ್ತು ದೇಶೀಯ ಕಂಪನಿಗಳಿಗೆ ಸೂಕ್ತವಾದ ಬೆಳವಣಿಗೆಯ ವಾತಾವರಣವನ್ನು ಸೃಷ್ಟಿಸುವ ಮೂಲಕ ಬಲಿಷ್ಠ ರಕ್ಷಣಾ ಪರಿಸರ ವ್ಯವಸ್ಥೆಯನ್ನು ನಿರ್ಮಿಸುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಚಿವರು, ದೇಶವು ಐದನೇ ತಲೆಮಾರಿನ ಯುದ್ಧ ವಿಮಾನಗಳನ್ನು ನಿರ್ಮಿಸುವ ಮತ್ತು ವಿಮಾನದ ಎಂಜಿನ್ ಅನ್ನು ತಯಾರಿಸುವ ದಿಕ್ಕಿನಲ್ಲಿ ಸಾಗುತ್ತಿದೆ. ಫ್ರಾನ್ಸ್ ಕಂಪನಿ ಸಫ್ರಾನ್‌ನೊಂದಿಗೆ ದೇಶದಲ್ಲಿ ಎಂಜಿನ್ ಉತ್ಪಾದನೆ ಪ್ರಾರಂಭವಾಗಲಿದೆ ಎಂದು ತಿಳಿಸಿದರು. ಕೇಂದ್ರ ಸರ್ಕಾರ ೬೬ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ೯೭ ತೇಜಸ್ ಯುದ್ಧ ವಿಮಾನಗಳನ್ನು ತಯಾರಿಸಲು ಹೆಚ್‌ಎಎಲ್ ನೊಂದಿಗೆ ಹೊಸ ಆದೇಶವನ್ನು ಅನುಮೋದಿಸಿದೆ. ಹೆಚ್‌ಎಎಲ್‌ಗೆ ಈ ಹಿಂದೆ ೪೮ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ೮೩ ವಿಮಾನಗಳನ್ನು ನಿರ್ಮಿಸಲು ಆದೇಶ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು. ರಕ್ಷಣಾ ವಲಯದಲ್ಲಿ ನಾವೀನ್ಯತೆ ಮತ್ತು ತಂತ್ರಜ್ಞಾನ ಅಭಿವೃದ್ಧಿಯನ್ನು ಉತ್ತೇಜಿಸಲು ಇನ್ನೋವೇಶನ್ ಫಾರ್ ಡಿಫೆನ್ಸ್ ಎಕ್ಸ್‌ಲೆನ್ಸ್ ಅನ್ನು ಪ್ರಾರಂಭಿಸಲಾಗಿದೆ ಎಂದು ಸಚಿವರು ಹೇಳಿದರು. ಕೇಂದ್ರ ಸರ್ಕಾರ ಖಾಸಗಿ ವಲಯಕ್ಕೆ ಸೂಕ್ತವಾದ ಬೆಳವಣಿಗೆಯ ವಾತಾವರಣವನ್ನು ಒದಗಿಸುತ್ತಿದೆ. ಯುದ್ಧ ವಿಮಾನಗಳು, ಹೆಲಿಕಾಪ್ಟರ್‌ಗಳು, ಟ್ಯಾಂಕ್‌ಗಳು, ಜಲಾಂತರ್ಗಾಮಿಗಳು

ಸೇರಿದಂತೆ ರಕ್ಷಣಾ ಉತ್ಪನ್ನಗಳ ನಿರ್ಮಾಣಕ್ಕೆ ಅವಕಾಶಗಳು ತೆರೆದಿದೆ. ಮುಂಬರುವ ವರ್ಷಗಳಲ್ಲಿ ದೇಶದ ಖಾಸಗಿ ಕಂಪನಿಗಳು ಜಾಗತಿಕ ದೈತ್ಯ ಕಂಪನಿಗಳಾಗಲು ಇದು ಸಹಾಯ ಮಾಡುತ್ತದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

<><><>

ವಿಶ್ವಸಂಸ್ಥೆಯ ಶಾಂತಿಪಾಲನ ಕಾರ್ಯಾಚರಣೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಏಕೀಕರಣಕ್ಕೆ ಭಾರತ ಬಲವಾದ ಬೆಂಬಲಿಗ ರಾಷ್ಟ್ರವಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ವಿಶ್ವಸಂಸ್ಥೆಯ ಮಹಿಳಾ ಮಿಲಿಟರಿ ಅಧಿಕಾರಿಗಳೊಂದಿಗೆ ಸಂವಾದ ನಡೆಸಿದ ಸಚಿವರು, ದೇಶದ ಸಶಸ್ತ್ರ ಪಡೆಗಳನ್ನು ಮತ್ತು ಶಾಂತಿಪಾಲನಾ ತುಕಡಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಸರ್ಕಾರ ತನ್ನ ನೀತಿಯನ್ನು ಬಲಪಡಿಸುತ್ತಿದೆ. ಸಶಸ್ತ್ರ ಪಡೆಗಳಲ್ಲಿ ಮಹಿಳೆಯರು ಸೇವೆ ಸಲ್ಲಿಸಲು ಸಮಾನ ಅವಕಾಶವಿದೆ ಎಂದರು.

<><><>

ಮತದಾರರ ಪಟ್ಟಿಯಲ್ಲಿ ಹೆಸರು ಕಾಣೆಯಾಗಿರುವ ಮತದಾರರ ಹಕ್ಕುಪತ್ರಗಳ ದಾಖಲೆಗಳ ಭೌತಿಕ ಸಲ್ಲಿಕೆಗೆ ಒತ್ತಾಯಿಸದೆ, ಆನ್‌ಲೈನ್‌ನಲ್ಲಿ ಸ್ವೀಕರಿಸುವಂತೆ ಚುನಾವಣಾ ಆಯೋಗಕ್ಕೆ ಇಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಭಾರತೀಯ ಚುನಾವಣಾ ಆಯೋಗ ಮೂಲತಃ ಪಟ್ಟಿ ಮಾಡಿರುವ ೧೧ ದಾಖಲೆಗಳಲ್ಲಿ ಯಾವುದಾದರೂ ಒಂದರೊಂದಿಗೆ ಅಥವಾ ಆಧಾರ್ ಕಾರ್ಡ್‌ನೊಂದಿಗೆ ಹಕ್ಕುಪತ್ರವನ್ನು ಸಲ್ಲಿಸಬಹುದು ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

<><><>

ದೇಶದ ಸೆಮಿ ಕಂಡಕ್ಟರ್ ವಿನ್ಯಾಸ ಸಾಮರ್ಥ್ಯಗಳನ್ನು ಹೆಚ್ಚಿಸಲು ಕೇಂದ್ರ ಸರ್ಕಾರವು ವಿನ್ಯಾಸ ಸಂಪರ್ಕಿತ ಪ್ರೋತ್ಸಾಹಕ ಯೋಜನೆಯಡಿಯಲ್ಲಿ ೨೩ ಚಿಪ್ ವಿನ್ಯಾಸ ಯೋಜನೆಗಳನ್ನು ಮಂಜೂರು ಮಾಡಿದೆ. ಈ ಯೋಜನೆಗಳನ್ನು ಕಣ್ಗಾವಲು ಕ್ಯಾಮೆರಾಗಳು, ಇಂಧನ ಮೀಟರ್‌ಗಳು, ಮೈಕ್ರೋ ಪ್ರೋಸೆಸರ್ ಐಪಿ ಮತ್ತು ನೆಟ್‌ವರ್ಕಿಂಗ್ ಅಪ್ಲಿಕೇಷನ್‌ಗಳಂತಹ ಕ್ಷೇತ್ರಗಳಿಗೆ ದೇಶೀಯ ಚಿಪ್‌ಗಳು ಮತ್ತು ಸಿಸ್ಟಮ್-ಆನ್-ಚಿಪ್ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಬೆಂಬಲ ಪಡೆಯುತ್ತಿವೆ. ೭೨ ಕಂಪನಿಗಳು ತಮ್ಮ ಚಿಪ್ ವಿನ್ಯಾಸ ಯೋಜನೆಗಳಿಗಾಗಿ ಉದ್ಯಮ ಪ್ರಮಾಣಿತ ಎಲೆಕ್ಟ್ರಾನಿಕ್ ವಿನ್ಯಾಸ ಆಟೊಮೇಷನ್ ಪರಿಕರಿಗಳಿಗೆ ಪ್ರವೇಶವನ್ನು ಪಡೆದುಕೊಂಡಿವೆ ಎಂದು ಕೇಂದ್ರ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ.

<><><>

ಭಾರತ ಸ್ವಾತಂತ್ರ್ಯದ ೧೦೦ ವರ್ಷಗಳನ್ನು ಆಚರಿಸುವ ಮೊದಲು ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡಲು ವಿಕಸಿತ ಭಾರತ-೨೦೪೭ಕ್ಕೆ ಇಸ್ರೋ ಕೊಡುಗೆ ನೀಡಲಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ ಅಧ್ಯಕ್ಷ ವಿ. ನಾರಾಯಣನ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ನಡೆದ ರಾಷ್ಟ್ರೀಯ ಸಭೆ-೨೦೨೫ರ ಉದ್ಘಾಟನಾ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ಕಕ್ಷೆಯಲ್ಲಿರುವ ೨ ಉಪಗ್ರಹಗಳನ್ನು ಯಶಸ್ವಿಯಾಗಿ ಡಾಕ್ ಮಾಡಿ, ಅನ್ ಡಾಕ್ ಮಾಡಿದ ೪ ದೇಶಗಳಲ್ಲಿ ಭಾರತ ಕೂಡ ಒಂದು. ಚಂದ್ರನ ಕಕ್ಷೆಯಲ್ಲಿ ಲಭ್ಯವಿರುವ ಅತ್ಯುತ್ತಮ ಕ್ಯಾಮೆರಾ ಭಾರತಕ್ಕೆ ಸೇರಿದೆ ಎಂದು ತಿಳಿಸಿದರು.

<><><><>

ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ವೇಳಾಪಟ್ಟಿಯಲ್ಲಿ ಮಹತ್ವದ ಬದಲಾವಣೆ ಮಾಡಲಾಗಿದ್ದು, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಕೆಲವು ಲೀಗ್ ಹಾಗೂ ಸೆಮಿಫೈನಲ್ ಪಂದ್ಯಗಳನ್ನು ಮುಂಬೈಗೆ ಸ್ಥಳಾಂತರಿಸಲಾಗಿದೆ. ಹಳೆಯ ವೇಳಾಪಟ್ಟಿಯ ಪ್ರಕಾರ, ಭಾರತ ಮತ್ತು ಶ್ರೀಲಂಕಾ ನಡುವಿನ ಪಂದ್ಯ ಸೆಪ್ಟೆಂಬರ್ ೩೦ ರಂದು ಬೆಂಗಳೂರಿನಲ್ಲಿ ನಡೆಯಬೇಕಿತ್ತು. ಈಗ ಅದು ಗುವಾಹಟಿ ಕ್ರೀಡಾಂಗಣಕ್ಕೆ ಸ್ಥಳಾಂತರಗೊಂಡಿದೆ. ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಪಂದ್ಯವು ಅಕ್ಟೋಬರ್ ೩ ರಂದು ಬೆಂಗಳೂರಿನಲ್ಲಿ ನಡೆಯಬೇಕಿತ್ತು, ಈಗ ಅದು ಗುವಾಹಟಿಯಲ್ಲಿ ನಡೆಯಲಿದೆ. ಬೆಂಗಳೂರಿನಲ್ಲಿ ನಡೆಯಬೇಕಿದ್ದ ಭಾರತ ಹಾಗೂ ನ್ಯೂಜಿಲೆಂಡ್ ಮತ್ತು ಭಾರತ ಹಾಗೂ ಬಾಂಗ್ಲಾದೇಶ ನಡುವಿನ ಲೀಗ್ ಪಂದ್ಯಗಳು ಕೂಡ ನವಿ ಮುಂಬೈ ಕ್ರೀಡಾಂಗಣದಲ್ಲಿ ನಡೆಯಲಿವೆ.

<><><><>

೨೦೨೩ರಲ್ಲಿ ಲಂಡನ್‌ಗೆ ಖಾಸಗಿ ಪ್ರವಾಸಕ್ಕೆ ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಶ್ರೀಲಂಕಾ ಮಾಜಿ ಅಧ್ಯಕ್ಷ ರಣಿಲ್ ವಿಕ್ರಮಸಿಂಘೆ ಅವರನ್ನು ಅಪರಾಧ ತನಿಖಾ ಇಲಾಖೆ ವಿಚಾರಣೆ ನಡೆಸಿದ ನಂತರ ಬಂಧಿಸಿದೆ. ೭೬ ವರ್ಷದ ರಣಿಲ್, ವೋಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯದಲ್ಲಿ ತಮ್ಮ ಪತ್ನಿ ಪ್ರೋಫೆಸರ್ ಮೈತ್ರಿ ವಿಕ್ರಮಸಿಂಘೆ ಅವರ ಪಿಹೆಚ್‌ಡಿ ಪದವಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಬ್ರಿಟನ್‌ಗೆ ಪ್ರಯಾಣಿಸಿದಾಗ ಖರ್ಚುಗಳನ್ನು ಭರಿಸಲು ಸರ್ಕಾರದ ಹಣವನ್ನು ಬೇರೆಡೆಗೆ ವರ್ಗಾಯಿಸಿದ್ದಾರೆ ಎಂದು ಪೊಲೀಸರು ಆರೋಪಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>